**ಸಿ.ಸಿ. ನಂ. 344/2014** **ಪಿ.ಡಬ್ಲ್ಯೂ-4**

**ಸಾಕ್ಷಿಗೆ ದಿನಾಂಕ 22.1.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಈ ಹಿಂದೆ ದಿನಾಂಕ 7.1.2021 ರಂದು ನನ್ನ ನುಡಿಸಾಕ್ಷ್ಯವನ್ನು ಹೇಳಿದಾಗ ತಪ್ಪಾಗಿ 1997-98 ರಿಂದ ಇಲ್ಲಿಯವರೆಗೆ ಲ್ಯಾಂಪ್ಸ ಸೊಸೈಟಿ, ಹೆಚ್.ಡಿ.ಕೋಟೆ ಇಲ್ಲಿ ಪ್ರಭಾರ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದು ಹೇಳಿದ್ದು, ಆದರೆ ನಾನು 2013 ರಿಂದ ಇಲ್ಲಿಯವರೆಗೆ ಸದರಿ ಸೊಸೈಟಿಯ ಪ್ರಭಾರ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅದರೆ ಪಾಚಿ, ಗೊಂದು ಹಾಗೂ ಜೇನಿಗೆ ಸಂಬಂಧಪಟ್ಟಂತೆ ಮಾರಾಟ ಗುಮಾಸ್ತನಾಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ

ದಿನಾಂಕ 12.5.2014 ರಂದು ನಾನು ಸದರಿ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ಸದರಿ ಸಂಘಕ್ಕೆ ಸಂಬಂಧಪಟ್ಟ ಬೈಲಾ ಪುಸ್ತಕ, ದಾಸ್ತಾನು ಪುಸ್ತಕ, ನಗದು ಪುಸ್ತಕ, ಆರೋಪಿಯನ್ನು ಸದರಿ ಸೊಸೈಟಿಯಲ್ಲಿ ಪ್ರಭಾರ ಕಾರ್ಯದರ್ಶಿಯಾಗಿ ನೇಮಕ ಮಾಡಿರುವ ಬಗ್ಗೆ ಆದೇಶ ಪ್ರತಿ ಮತ್ತು ಆರೋಪಿಗೆ ಸಹಾಯಕ ನಿಬಂಧಕರು, ಮೈಸೂರು ರವರು ನೀಡಿದ್ದ ನೋಟಿಸನ್ನು ಹೆಚ್.ಡಿ.ಕೋಟೆ ಪೋಲಿಸರಿಗೆ ನೀಡಿದ್ದು, ಅವುಗಳನ್ನು ಪೋಲಿಸರು ನನ್ನ ಹಾಗೂ ಚಾಸ 17 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಸಂಜೆ 4 ರಿಂದ 5 ಗಂಟೆವರೆಗೆ ಅಮಾನತ್ತು ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ19 ಎಂದು, ಸಾಕ್ಷಿಯ ಸಹಿಯನ್ನು ನಿಪಿ19 ಎ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸದರಿ ದಿನ ಹಾಜರುಪಡಿಸಿದ ಬೈಲಾ ಪುಸ್ತಕ, ದಾಸ್ತಾನು ಪುಸ್ತಕ, 2007-08 ಮತ್ತು 2008-09 ರ ಸಾಲಿನ ನಗದು ಪುಸ್ತಕವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ20 ರಿಂದ ನಿಪಿ23 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಆರೋಪಿಯನ್ನು ಸದರಿ ಸೊಸೈಟಿಯಲ್ಲಿ ಪ್ರಭಾರ ಕಾರ್ಯದರ್ಶಿಯಾಗಿ ನೇಮಕ ಮಾಡಿರುವ ಬಗ್ಗೆ ಆದೇಶ ಪ್ರತಿ ಮತ್ತು ಆರೋಪಿಗೆ ಸಹಾಯಕ ನಿಬಂಧಕರು, ಮೈಸೂರು ರವರು ನೀಡಿದ್ದ ನೋಟಿಸನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳು ಜೆರಾಕ್ಸ ಪ್ರತಿಯಾದ್ದರಿಂದ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

ದಿನಾಂಕ 22.5.2014 ರಂದು ನಾನು ಸದರಿ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ಸದರಿ ಸಂಘಕ್ಕೆ ಸಂಬಂಧಪಟ್ಟ ಪಾಸ್ ಪುಸ್ತಕ, ವೋಚರ್ ಬಂಡಲ್, ಎರಡು ರಶೀದಿ ಪುಸ್ತಕಗಳನ್ನು ಹೆಚ್.ಡಿ.ಕೋಟೆ ಪೋಲಿಸರಿಗೆ ನೀಡಿದ್ದು, ಅವುಗಳನ್ನು ಪೋಲಿಸರು ನನ್ನ ಹಾಗೂ

ಚಾಸ 17 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 2 ರಿಂದ 3 ಗಂಟೆವರೆಗೆ ಅಮಾನತ್ತು ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ24 ಎಂದು, ಸಾಕ್ಷಿಯ ಸಹಿಯನ್ನು ನಿಪಿ24 ಎ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸದರಿ ದಿನ ಹಾಜರುಪಡಿಸಿದ ಪಾಸ್ ಪುಸ್ತಕವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ25 ಎಂದು, 30 ವೋಚರುಗಳ ಬಂಡಲನ್ನು ಒಟ್ಟಾಗಿ ನಿಪಿ26 ಎಂದು, ಎರಡು ರಶೀದಿ ಪುಸ್ತಕಗಳನ್ನು ನಿಪಿ27 ಮತ್ತು ನಿಪಿ28 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ವಿಚಾರವಾಗಿ ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಸದರಿ ಅವಧಿಯಲ್ಲಿ ನಮ್ಮ ಸೊಸೈಟಿಯ ಪ್ರಭಾರ ಕಾರ್ಯದರ್ಶಿಯಾಗಿದ್ದರು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ**

ನಾನು 2013 ರಲ್ಲಿ ಸದರಿ ಸೊಸೈಟಿಯ ಪ್ರಭಾರ ಕಾರ್ಯದರ್ಶಿಯಾಗಿ ನೇಮಕವಾದ ನಂತರ ನನ್ನ ಹಿಂದಿನ ಕಾರ್ಯದರ್ಶಿಯಾದ ಜಗದೀಶ ಎಂಬುವವರಿಂದ ಚಾರ್ಜನ್ನು ಪಡೆದುಕೊಂಡಿರುತ್ತೇನೆ. ನಾನು ಚಾರ್ಜನ್ನು ಪಡೆದುಕೊಂಡಿರುವ ಬಗ್ಗೆ ದಾಖಲಾತಿ ನನ್ನ ಬಳಿ ಇರುತ್ತದೆ. ಅದನ್ನು ಪೋಲಿಸರಿಗೆ ನೀಡಿರುವುದಿಲ್ಲ. ಪೋಲಿಸರು ಸ್ಥಳ ಮಹಜರು ಮಾಡುವ ಪೂರ್ವದಲ್ಲಿ ನೋಟಿಸನ್ನು ನೀಡಿರುವುದಿಲ್ಲ, ಮೌಖಿಕವಾಗಿ ಹೇಳಿರುತ್ತಾರೆ. ಸ್ಥಳ ಮಹಜರು ಮಾಡಲು ನಂಜಪ್ಪ ಎಂಬ ಪೋಲಿಸರು ಬಂದಿದ್ದರು. ಸದರಿ ಸಮಯದಲ್ಲಿ ನಾನು, ಚಾಸ 15 ಮತ್ತು 18 ರವರು ಇದ್ದೆವು. ನಿಪಿ4 ರಲ್ಲಿರುವ ಅಂಶಗಳನ್ನು ಪೋಲಿಸರೇ ಬರೆದುಕೊಂಡಿರುತ್ತಾರೆ. ಪೋಲಿಸರು ನಿಪಿ4 ರಂತೆ ಮಹಜರನ್ನು ಮಾಡಿದಾಗ ಪೋಲಿಸರು ಯಾವುದೇ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ಸ್ಥಳ ಮಹಜರು ಮಾಡಿದ ನಂತರ ಇನ್ನೊಮ್ಮೆ ಹೆಚ್.ಡಿ.ಕೋಟೆ ಪೋಲಿಸರು ನಮ್ಮ ಸೊಸೈಟಿಗೆ ಬಂದಿದ್ದು ಎಷ್ಟು ಸಮಯದ ನಂತರ ಬಂದಿರುತ್ತಾರೆ ಎಂದು ಈಗ ನೆನಪಿರುವುದಿಲ್ಲ. ಸದರಿ ಸಮಯದಲ್ಲಿ ಪೋಲಿಸರು ದಾಖಲೆಗಳನ್ನು ತೆಗೆದುಕೊಂಡಿರುತ್ತಾರೆ. ಪೋಲಿಸರು ನಿಪಿ5 ರಂತೆ ದಾಖಲೆಗಳನ್ನು ಪಡೆದುಕೊಂಡಾಗ ನನಗೆ ಹಿಂಬರಹ ನೀಡಿರುತ್ತಾರೆ. ಸದರಿ ಹಿಂಬರಹ ನನ್ನ ಬಳಿ ಇರುತ್ತದೆ. ಪೋಲಿಸರು ರಿಜಿಸ್ಟರನ್ನು ಅಮಾನತ್ತುಪಡಿಸಿಕೊಂಡಾಗ ಅದರ ಮೇಲೆ ಚೀಟಿ ಅಂಟಿಸಿ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ನಿಪಿ4 ಮತ್ತು 5 ಮಹಜರನ್ನು ಪೋಲಿಸರು ಠಾಣೆಯಲ್ಲಿ ಸೃಷ್ಟಿ ಮಾಡಿದ್ದು ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪುನಃ ಇತರೆ ದಾಖಲೆಯನ್ನು ಹಾಜರುಪಡಿಸುವಂತೆ ನನಗೆ ಲಿಖಿತವಾಗಿ ಪೋಲಿಸರು ನೋಟಿಸನ್ನು ನೀಡಿರುವುದಿಲ್ಲ. ಪೋಲಿಸರು ನಿಪಿ19 ಮತ್ತು 24 ರಂತೆ ದಾಖಲೆಯನ್ನು

ಅಮಾನತ್ತುಪಡಿಸಿಕೊಂಡಾಗ ಅವುಗಳ ಮೇಲೆ ಚೀಟಿ ಅಂಟಿಸಿ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ನಾನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. 2013 ರ ಪೂರ್ವದಲ್ಲಿ ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಆರೋಪಿಗೆ ಡಿ.ಆರ್, ಮೈಸೂರು ಇವರು ನೀಡಿರುವ ನೋಟಿಸನ್ನು ನಾನು ಪಡೆದುಕೊಂಡಿರುವುದಿಲ್ಲ, ನನ್ನ ಹಿಂದಿನ ಕಾರ್ಯದರ್ಶಿಯವರು ಪಡೆದುಕೊಂಡಿರುತ್ತಾರೆ. ಆರೋಪಿಯ ವಿರುದ್ಧ ಇಲಾಖಾ ವಿಚಾರಣೆ ಏನಾಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ